ಹುಣ್ಣಿಮೆಗೆ ಮೆರವಣಿಗೆ ಇರ್ತಿದ್ವು. ಭಜನೆ ಹಾಡು ಇರುತ್ತಿದ್ವು. ಯುಗಾದಿಗೆ ಹರಿಜನ ಕೇರಿಯೊಳಗ ಒಂದು ಬಯಲಾಟ ಆಡಿಸಿದರೆ ಊರೊಳಗೂ ಒಂದು ಆಡಿಸ್ತಿದ್ರು. ಎರಡ್ಮೂರು ತಂಡಗಳಿರುತಿದ್ವು. ಅವು ಎದುರುಬದುರಾಗವು. ಅವರು ದಮ್ಮಿಗಿ ಬಂದು ಕುಂತ್ರ ಇನ್ನೊಂದು ತಂಡದವ್ರು ಕೋಲಾಟ ಹಾಕೋರು. ರಾತ್ರಿಬೆಳಗನ ಹಾಡು ಕುಣಿತ. ಸುಮಾರಾಗಿ ಎಲ್ಲಾ ಹಳ್ಳಿ ಹಳ್ಳಿಗಿ ಇದೇ ವಾತಾವರಣ ಇತ್ತು. ಸಲಗರದೊಳಗ ನಮ್ಮ ಮನಿ ಎದುರೇ ಮಸೂತಿ ಆದ. ಆ ಮಸೂತಿದೊಳಗೇನೆ ಮೊಹರಂ ಬಂತಂದ್ರ ತಿಂಗಳಾನುಗಟ್ಟಲೆ ಬಯಲಾಟ ಆಡ್ತಿದ್ರು. ಮನೆ ಹಿಂದೆ ಬಯಲಾಟದ ತಾಲೀಮು ನಡೀತಾ ಇತ್ತು. ಬ್ರಾಹ್ಮಣರ ದೊಡ್ಡ ವಠಾರ ನಮ್ಮ ಮನಿ ಬೆನ್‌ಗ್ವಾಡಿಗಿ ಹತ್ತೆ ಅದ. ಆ ವಠಾರದೊಳಗ ಒಂದು ರೂಮ್ ಕಾಯಂ ಆಗಿ ತಾಲೀಮು ಮಾಡೋರಿಗೆ ಬಿಟ್ಟುಕೊಟ್ಟಿದ್ದರು. ಬಾಲ್ಯದೊಳಗಿನ ಇಂಥ ಜೀವನ ಸಮೃದ್ಧವಾಗಿತ್ತು. ಮದುವೆ ಹಾಡು, ಸೋಬಾನ ಹಾಡು, ಕುಟ್ಟುವ ಹಾಡು, ಬೀಸೋ ಹಾಡು, ಲಾವಣಿ, ಕಥಿ ಇಂಥವೆಲ್ಲ ಕಣ್ಣಿಗಿ ಕಿವಿಗಿ ದಿನಾ ಒಂದಿಲ್ಲೊಂದು ಕಡೆ ಬೀಳ್ತಿದ್ದವು. ನಮ್ಮೂರಾಗ ಭಾಳ್ ಚಲೋ ಸಾರಥಿ ಮಾತು ಕಟ್ಟೋರು, ಹೇಳೋರು ಇದ್ರು. ನಮ್ಮೂರಾಗ ಇಬ್ಬರು ಮುಖ್ಯ ಕವಿಗಳು ಇದ್ರು. ಸಂಗಯ್ಯ ಸ್ವಾಮಿ ಅಂತ ಒಬ್ಬರಿದ್ರು. ಇನ್ನೊಬ್ಬರು ಲಕ್ಷ್ಮಣ ನಾಟಿಕಾರ್ ಅಂತ. ಅವರಿಬ್ಬರ ಜೊತಿ ನನಗ ವ್ಯವಾಟಿತ್ತು. ಹಾಡು ಹೆಂಗ್ ಕಟ್ಟತಾರ? ವಿಷಾಕ್ಷರಗಳು ಅಂದ್ರ ಏನು? ಹಂತಿ ಆಚರಣೆಗಳ ಏನದಾವ? ಬೀದಿ ಬಯಲಾಟದ ಲಕ್ಷಣ ಏನು? ಇವೆಲ್ಲ ಅಲ್ಲೆ ಗೊತ್ತಾದವು ನನಗ. ಹಂತಿಯೊಳಗ ಏನೇನು ನಡೀತದ ಅಂತ ಗೊತ್ತಿತ್ತು. ಬೂದುಗ ಯಾವಾಗ ನಿರ್ಮಾಣ ಮಾಡ್ತಾರ? ಅನ್ನೋದು ಗೊತ್ತಾಯ್ತು. ಇವೆಲ್ಲ ಕಣ್ಣೆಲೆ ನೋಡಿ ಬೆಳಿದೀವಿ. ಅಲ್ಲೇನು ನೋಡಿದ್ನೊ ಮುಂದೆ ಅದನ್ನೆ ಅಧ್ಯಯನದ ಶಿಸ್ತಿಗೆ ಒಳಪಡಿಸ್ದೆ. ಒಬ್ಬವ ಹರಿಜನ ಬಸಪ್ಪ ಅಂತ ನಮ್ಮ ಅಪ್ಪೋರ ದೋಸ್ತ್ ಇದ್ದ. ಹಂತಿ ನಡದಾಗ ಅವನಿಗಿ ನಮ್ಮ ಹೊಲಕ ಕರ್ಕೊಂಡು ಬರೋರು. ಅವ ಚೌಪದಿಗಳನ್ನ ತ್ರಿಪದಿಗಳ ಧಾಟಿಯಲ್ಲಿ ಹಾಡ್ತಿದ್ದ. ಈ ಬೂದುಗದ ನಿರ್ಮಾಣ ಮಾಡಿ ಹೆಂಗ ಹಂತಿ ಹಾಡುಗಳನ್ನ ಹಾಡ್ತಾರ ಅನ್ನೋದು ನನಗ ಗೊತ್ತಾದದ್ದು ಅವನಿಂದಲೇನೆ. ಮುಂದಕ್ಕ ಮೂರು ಹೆಜ್ಜೆ ಹೋಗಿ, ಬಾಲಕ್ಕ ಕೂದಲ ಎಳಿ ಸಿಗಸಿ ಹೆಂಗ್ ನಿರ್ಮಾಣ ಮಾಡ್ತಾರ? ಯಾವಾಗ ನಿರ್ಮಾಣ ಮಾಡ್ತಾರ? ಅವೆಲ್ಲ ಹಾಡುಗಳು ಗೊತ್ತಾದದ್ದು ಅವನಿಂದಾಗಿ.

**◆ ಆಮೇಲೆ ನೀವು 1973ರಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯಕ್ಕ ಬಂದ್ರಿ. ಆವಾಗದು ಕರ್ನಾಟಕ ವಿಶ್ವವಿದ್ಯಾಲಯದ ಪಿ.ಜಿ. ಸೆಂಟರ್ ಆಗಿತ್ತು. ನೀವು ಕಲಿಯುವಾಗ ಇಲ್ಲಿನ ವಾತಾವರಣ ಹೇಗಿತ್ತು? ಜಾನಪದದ ಅನುಭವ ಅಧ್ಯಯನವಾಗಿ ಹೇಗೆ ತಿರುವು ಪಡೀತು?**

ಆಕಸ್ಮಾತ್ ಸಿಕ್ಕ ಅವಕಾಶಗಳು ಈ ಕಡಿ ಕರ್ಕೊಂಡು ಬಂದ್ವು. ಅದು 1967 ಅಂತ ಕಾಣಿಸುತ್ತ. ಗೊ.ರು.ಚ ಅವರೆಲ್ಲ ಸೇರಿ ದೊಡ್ಡ ಜಾನಪದ ಸಮ್ಮೇಳನ ಮಾಡಿದ್ರು. ಅನಂತರ 1970ರೊಳಗ ಇರಬೇಕೇನೊ. ಮೈಸೂರು ಯೂನಿವರ್ಸಿಟಿಯವರು, ದೇ. ಜವರೇಗೌಡರು ಕನ್ನಡದೊಳಗ ಜನಪದ ಸಾಹಿತ್ಯ ಅಂತ ಒಂದು ಪೇಪರ್ ಇಟ್ರು. ಅದರ ಮರು ವರ್ಷವೇ ನಾನು 1973–1974ರಲ್ಲಿ ಎಂ.ಎ. ಮಾಡ್ಲಿಕ್ಕ ಬಂದೆ. ಕರ್ನಾಟಕ ಯೂನಿವರ್ಸಿಟಿಯವರು ಇಲ್ಲಿ ಜಾನಪದ ಪೇಪರ್ ಇಟ್ರು. ಇಲ್ಲೂ ಬಿ.ಬಿ. ಹೆಂಡಿಯವರಿಗಿ ಜಾನಪದದ ಹುಚ್ಚು ಜಾಸ್ತಿ. ಹೀಗಾಗಿ ಈ ಕನ್ನಡ ಎಂ.ಎ.ಗೆ ಜಾನಪದ ಕೋರ್ಸು ಸೇರಿಸಿದ್ರು. ಕಲಬುರಗಿಯೊಳಗ ಮೊದಲು ಜೆ.ಟಿ.ಎಸ್ ಶಾಲೆಯೊಳಗ ಪಿ.ಜಿ. ಸೆಂಟರ್ ಇತ್ತು. 1973ಕ್ಕ ಕ್ಯಾಂಪಸ್ಸಿಗಿ ಬಂದ್ವಿ. ನಮ್ಮದೇ ಮೊದಲನೆ ಬ್ಯಾಚು.

1973 ಜಾನಪದಕ್ಕೆ ಒಳ್ಳೆಯ ವರ್ಷ. ಇಲ್ಲಿ ಬಿ.ಬಿ. ಹೆಂಡಿ, ಮ.ಗು. ಬಿರಾದಾರ ಮತ್ತು ಎಂ.ಎಸ್. ಲಠ್ಠೆ ಅವರಿದ್ರು. ಎಲ್ಲರೂ ಹಳ್ಳಿಯಿಂದಲೇ ಬಂದವರು. ಹೆಂಡಿ ಸರ್ ಇಲ್ಲಿ ಏನು